**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,**
**ದೊಡ್ಡಬಳ್ಳಾಪುರ**

**ಸಿ ಸಿ ನಂ : 1767/2020**

**ಪಿ ಡಬ್ಲ್ಯೂ - 3**
**ಸಿ ಡಬ್ಲ್ಯೂ - 4**

**ದಿಃ 02.09.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಹೆಸರು ಃ ರಾಮಚಂದ್ರ**
**ತಂದೆಯ ಹೆಸರು ಃ ಸಿದ್ದಗಂಗಯ್ಯ**
**ವಯಸ್ಸು ಃ 60 ವರ್ಷ**
**ಉದ್ಯೋಗ ಃ ಕೂಲಿ ಕೆಸಲ**
**ವಿಳಾಸ ಃ ಕನಸವಾಡಿ, ದೊಡ್ಡಬಳ್ಳಾಪುರ**

**ಮುಖ್ಯ ವಿಚಾರಣೆ ಃ ಸ ಸ ಅ ರವರಿಂದ**

ಸಾಕ್ಷಿಯು ನಿಪಿ-2 ಪಂಚನಾಮೆಯಲ್ಲಿನ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ನಿಪಿ-2 ಕ್ಕೆ ಸಹಿಯನ್ನು ನಾನು ಸುಮಾರು 4 ವರ್ಷಗಳ ಹಿಂದೆ ಬೆಳವಂಗಲದ ರೋಡಿನಲ್ಲಿ ಹಾಕಿರುತ್ತೇನೆ. ಆ ಸಮಯದಲ್ಲಿ ಚಾಸಾ-1 ಮತ್ತು 5 ರವರು ಹಾಜರಿದ್ದರು. ಪೋಲೀಸರು ಅಪಘಾತ ಸ್ಥಳದ ಮಹಜರ್ ನ್ನು ಮಧ್ಯಾಹ್ನ 3-00 ರಿಂದ 3-30 ಗಂಟೆ ಸಮಯದಲ್ಲಿ ಮಾಡಿ, ಸ್ಥಳದಲ್ಲಿ ಲಾರಿ ಕಂಟೇನರ್ ನ್ನು ಅಮಾನತ್ತುಪಡಿಸಿಕೊಂಡರು. ಲಾರಿ ಕಂಟೇನರ್ ಸಂಖ್ಯೆ ಗೊತ್ತಿಲ್ಲ. ಸಾಕ್ಷಿಯು ನಿಪಿ-3 ಮತ್ತು 4 ರಲ್ಲಿನ ವಾಹನವನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಬಿ.ಸಿ. ಆರೋಪಿ ಪರ ವಕೀಲರಿಂದ**

ಪೋಲೀಸರು ನನಗೆ ಪಂಚನಾಗಿ ಹಾಜರಿರಲು ನೋಟೀಸ್‌ನ್ನು ಕೊಟ್ಟಿರಲಿಲ್ಲ. ಪೋಲೀಸರು ಪಂಚನಾಮೆಯನ್ನು ಜರುಗಿಸಲು ಪೋಲೀಸ್ ದ್ವಿಚಕ್ರ ವಾಹನದಲ್ಲಿ ಬಂದಿದ್ದರು. ಪೋಲೀಸರು ಠಾಣೆಯಲ್ಲಿ ಬರೆದ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪೋಲೀಸರು ಪಂಚನಾಮೆಯನ್ನು ಮೊದಲನೇ ಬೆರಳಚ್ಚು ಮಾಡಿ ತಂದಿದ್ದರು ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ನಿಪಿ-2 ಪಂಚನಾಮೆಯಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ಪೋಲೀಸರು ನನ್ನ ಮುಂದೆ

ಪಂಚನಾಮೆಯನ್ನು ಮಾಡಿರುವುದಿಲ್ಲ ಹಾಗೂ ಯಾವುದೇ ವಾಹನವನ್ನು ಅಮಾನತ್ತುಪಡಿಸಿಕೊಂಡಿಲ್ಲ, ನಾನು ಮೃತ ವ್ಯಕ್ತಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಕಂಪ್ಯೂಟರನಲ್ಲಿ ಮಾಡಿಸಲಾಯಿತು)**

**ಓ ಹೇ ಕೇ ಸ ಅದೆ**

**ಅಪರ ಸಿವಿಲ್ ನ್ಯಾ. ಮತ್ತು**
**ಜೆ.ಎಂ.ಎಫ್.ಸಿ, ದೊಡ್ಡಬಳ್ಳಾಪುರ**